ಇದು ಅಂತ ಹೊತಿದ್ರು. ಈಗ್ ಅಲ್ಲಿ ಯಾರೂ ಹೋಗಲ್ಲ. ನಾನು ಅದಕ್ಕೆ ಆ ಬದಿಯೇ ಮದ್ ಕಟ್ ಇಟ್ ಬತ್ನಿ. ರಾತ್ರಿ ಮಾಂಸದ ವಾಸ್ನೆಗೆ ಹಂದಿ ಬಂದ್ ತಿಂತಾವ. ತಿಂದ್ ಮೇಲೆ ಉಳಿಯಲ್ಲ. ಆ ಕ್ಷಣಕ್ಕೆ ಸಾಯ್ತವೆ. ಒಂದ್ ಹಂದಿ ಸತ್ರು ಸಾಕ್. ಅದನ್ನು ನೋಡಿಕೊಂಡೆ ಮತ್ ಹಂದಿ ಈ ಬದಿ ತಲಿ ಹಾಕಿಯೂ ಮಲಗಲ್ಲ'

'ಅಲ್ಲಾ, ಅವ್ರಿಗೆ ಯಾರಿಗಾದ್ರೂ ಗೊತ್ತಾರೆ' ಎಂದು ಮತ್ತೊಮ್ಮೆ ಕಲ್ಲಮ್ಮ ಭಯವನ್ನು ವ್ಯಕ್ತಪಡಿಸಿದಳು

'ಅವ್ರು ಅಂದರೆ ಫಾರೆಸ್ಟ್ನರಾ ? ಅವ್ರಿಗೇನ್ ಕಂಡಿಬಾಗಿಲು ಕಾನ್ ಗೊತ್ತೈತಂತ. ಅವ್ರು ಅಲ್ಲಿ ದಿನಾ ಬಂದು ಮದ್ ಯಾರ್ ಇಟ್ತಾರೆ ಅಂತಾ ನೋಡಕಾ ಹೋತಾರ? ಅವ್ರಿಗೇನು ಮಾಡಕ್ಕೆ ಬೇರೆ ಕ್ಯಾಮ್ ಇಲ್ಲಂತ ತಿಳಿಕಂಡ್ಯ ಹೆಂಗೆ. ಅಲ್ಲಿ ನಾವ್ ಇಟ್ರೆ ಯಾರ್ ಹೋಗಿ ಅವ್ರಿಗೆ ಹೇಳ್ತರೆ ಹೇಳು. ಒಂದೊಮ್ಮೆ ಮದ್ ಇಟ್ಟದ್ದು ಗೊತ್ತಾದ್ರೂ ಯಾರ್ ಮಾಡಿದ್ದು ಅಂತ ಹೆಂಗೆ ಗೊತ್ತಾತಾತೆ. ಅದಕ್ಕೇನು ಸಾಕ್ಷಿ ಇರ್ತೈತಾ? ಒಂದು ಕೇಳ್ತಿನಿ. ಪ್ರಾಣಿ ಉಳಿಸ್ತಿವಿ ಅಂತ ಬೋರ್ಡು ಹಾಕೋ ಅವ್ರು, ಮೊದಲು ಅವುಗಳಿಂದ ಆಗುವ ನಷ್ಟವಾ ತುಂಬಿಸಿ ಕೊಡ್ತಾರಾ, ಏನೂ ಇಲ್ಲ. ಸುಮ್ನೆ ಬೋಳಿಮಕ್ಳು ನಮ್ ಹತ್ರ ದುಡ್ಡು ತಿಂದು ಸುಳ್ ಲೆಕ್ಕ ಕೊಟ್ಟು ನಮ್ಮ ಪ್ರಾಣ ತಿಂತಾರೆ. ಅಲ್ಲಾ ಮರ‍್ರೈತಿ ನಮ್ ಬದ್ಕನ್ನು ಯಾರ್ ಉಳಿಸಿಕೊಡ್ತರೆ ಹೇಳು. ನಾವೆ ಮಾಡ್ಕಾಬೊಕು' ಎನ್ನುತ್ತ ಬೊಮ್ಮ ಒಂದೇ ಉಸಿರಿನಲ್ಲಿ ಮಾತನ್ನು ಆಡಿ ಬಿಟ್ಟಿದ್ದ. ಬೊಮ್ಮನ ಈ ಯೋಚನೆಗೆ ಕಲ್ಲಮ್ಮನಿಗೆ ಪೂರ್ಣವಾಗಿ ಒಪ್ಪಿಗೆ ಇರದಿದ್ದರೂ ಹೇಗಾದರೂ ಈ ಹಂದಿ ಕಾಟದಿಂದ ಮುಕ್ತಿ ಸಿಕ್ಕರೇ ಸಾಕೆಂಬಂತೆ ಅಂದುಕೊಂಡಿದ್ದಳು. ಜೊತೆಗೆ ಬೊಮ್ಮ ಅಷ್ಟು ಖಾತ್ರಿಯಾಗಿ ಮಾತನ್ನು ಆಡಿದ ಮೇಲೆ ಕಲ್ಲಮ್ಮನಿಗೆ ಮರು ಮಾತನ್ನು ಆಡುವುದಕ್ಕೂ ಸಾಧ್ಯವಾಗಿರಲಿಲ್ಲ.

ಸಂಜೆಯಾಗುತ್ತಿದ್ದಂತೆ ಬೊಮ್ಮ ತಂದಿದ್ದ ಪೊಟ್ಟಣಗಳನ್ನು ಮತ್ತೆ ಚೀಲದಲ್ಲಿ ತುಂಬಿದ್ದ. ಜೊತೆಗೆ ಕೋಳಿಯ ಮಾಂಸದ ಕವರ್ ನ್ನು ಆ ಚೀಲದಲ್ಲಿ ತುಂಬಿ, ಹಾಳೆ ಟೋಪ್ಪಿಯನ್ನು ತಲೆಗೆ ಹಾಕಿಕೊಂಡು, ಕೈಯಲ್ಲೊಂದು ಕತ್ತಿಯನ್ನು ಹಿಡಿದು, ಕಂಡಿಬಾಗಿಲು ಕಾನಿನ ಕಡೆ ಹೊರಟ. ಅವನ ಜೊತೆ ಅವನ ಟಾಮಿ, ಬೈರ ನಾಯಿಗಳು ಹೆಜ್ಜೆ ಹಾಕಿದವು. ಅವು ಬೊಮ್ಮ ಹೋದಲ್ಲಿ, ಬಂದಲ್ಲಿ ಸಾಗುವುದು ನಿತ್ಯದ ರೂಢಿಯಾಗಿತ್ತು. ಜೊತೆಗೆ ಬರುತ್ತಿದ್ದ ಕೋಳಿ ಮಾಂಸದ ವಾಸನೆಗೋ ಏನೋ ಬೊಮ್ಮನ ಕೈಚೀಲವನ್ನು ಎರಡೆರಡು ಬಾರಿ ಮೂಸಿ ಧೃಢಪಡಿಸಿಕೊಂಡು ಜೊಲ್ಲು ಸುರಿಸುತ್ತಿದ್ದವು. ಅವನ್ನು ಹಚ್ ಎಂದು ಗದರಿಸಿ, ಕಲ್ಲಮ್ಮನಿಗೆ ನಾಯಿಗಳನ್ನು ಕಟ್ಟುವಂತೆ ಸೂಚಿಸಿ ಕಂಡಿಬಾಗಿಲು ಕಾಡಿನತ್ತ ಹೊರಟುಹೋದ. ಕಂಡಿಬಾಗಿಲು ಅದು ದಟ್ಟವಾದ ಕಾಡು. ಹಿಂದೆಲ್ಲ ಅಲ್ಲಿ ಬೆತ್ತವನ್ನು ಕಡಿಯುವುದಕ್ಕೆ ಮನುಷ್ಯರು ಓಡಾಡುತ್ತಿದ್ದರೇ ವಿನಃ ಈಗ ಅಲ್ಲಿ ಓಡಾಟ ಕಡಿಮೆಯೇ ಎನ್ನುಬಹುದಾಗಿತ್ತು. ಬೊಮ್ಮ ಎರಡು ಗುಡ್ಡಗಳ ನಡುವಿನ ಕಣಿವೆಯಲ್ಲಿ ಒಂದೆರಡು ಮೈಲು ನಡೆದು ಬಂದ. ಹಂದಿಗಳು ಬರುವ ಜಾಗದಲ್ಲಿ ತನ್ನ ಹಡಪವನ್ನು ಬಿಡಿಸಿದ್ದ. ಅಲ್ಲಿಯೇ ಇದ್ದ ಬೆಣಚುಕಲ್ಲಿನ ಕತ್ತಿಯಿಂದ ಪುಡಿ ಮಾಡಿಕೊಂಡು ಒಂದು ಕಾಗದದಲ್ಲಿ ಹಾಕಿದ. ಅದು ನಾಲ್ಕು ಸಣ್ಣ ಚಪ್ಪಟೆ ಕಲ್ಲುಗಳನ್ನು ಚೌಕಾರದಲ್ಲಿ ಜೋಡಿಸಿ, ಅದರ ಮಧ್ಯದಲ್ಲಿ ಮಸಿಯನ್ನು, ರಂಜಕ, ಪೊಟಾಷ್ ಗಳನ್ನು ತುಂಬಿ, ಕಲ್ಲು ಜಾರದಂತೆ ಬಿಗಿಯಾಗಿ ಕಟ್ಟಿ, ಮಾಂಸ ತಿನ್ನುವಾಗ ಕಲ್ಲು ಕಲ್ಲು ತಾಗಿ ಬೆಂಕಿ ಹೊತ್ತಿ, ಸ್ಫೋಟವಾಗುವಂತೆ ಮಾಡುವುದು ಅದರ ವಿಧಾನವಾಗಿತ್ತು. ಬೀರ ಹೇಳಿದಂತೆ ಅದನ್ನು ಉಂಡೆಯಾಗಿ ಕಟ್ಟ ತೊಡಗಿದ್ದ. ಒಮ್ಮೆ ಸುತ್ತಲೂ ನೋಡಿ ಯಾರಾದರೂ ನೋಡುತ್ತಿರುವರೆ ಎಂದು ಗಮನಿಸಿಕೊಂಡ. ಯಾರೂ ಇಲ್ಲವೆಂಬುದು ಖಾತ್ರಿಯಾದ ಬಳಿಕ, ತನ್ನ ಕಾರ್ಯದಲ್ಲಿ ಮಗ್ನನಾದ . ಚೆಂಡಿನ ಆಕಾರದಲ್ಲಿ ಮದ್ದನ್ನು ಕಟ್ಟಿದ ಮೇಲೆ ಹಂದಿಯ ಆಕರ್ಷಣೆಗಾಗಿ ಕೋಳಿಯ ಮಾಂಸವನ್ನು ಅದರಲ್ಲಿ ತುಂಬಿ ಹಂದಿ ಬರುವ ಜಾಗದಲ್ಲಿ ಇಟ್ಟಿದ್ದ. ಮನುಷ್ಯರಿಗೆ ಅದು ತಿಳಿಯದಂತೆ ಅದರ ಮೇಲೆ ಯಾವುದೋ ಮರದ ಸೊಪ್ಪನ್ನು ಬಿಡಿಸಿ ಹಾಕಿದ. ಈ ಕಾರ್ಯ ಮುಗಿಯುವ ವೇಳೆಗೆ ಬೇಸಿಗೆಯ ಸೆಖೆಗೋ ಅಥವಾ ತನ್ನೊಳಗೆ ಸೃಜಿಸುತ್ತಿರುವ ಭಯದಿಂದಲೋ ಏನೋ ಬೊಮ್ಮನ ಮೈ ಬೆವರಿನಿಂದ ಒದ್ದೆಯಾಗಿ ಹೋಗಿತ್ತು.

ಬೊಮ್ಮನಿಗೆ ಕಾರ್ಯ ಮುಗಿದ ಮೇಲೆ ಅಲ್ಲಿಯೇ ಹೆಚ್ಚು ಹೊತ್ತು ನಿಲ್ಲುವುದಕ್ಕೆ ಸಾಧ್ಯವಾಗಲಿಲ್ಲ. ಮನಸ್ಸು ಏನೇನೋ ಚಿಂತಿಸುತ್ತ ಮನೆಗೆ ಬಂದ.